## 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

## S.C. No. 113/2023

**ಸಾಕ್ಷಿಯನ್ನು ದಿನಾಂಕ 9.12.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಮಹೇಶ | ಪಿ.ಡಬ್ಲ್ಯೂ-6 |
| ತಂದೆಯ/ಗಂಡನ ಹೆಸರು | : | ಮಾದಯ್ಯ | ಸಿ.ಡಬ್ಲ್ಯೂ-5 |
| ವಯಸ್ಸು | : | 38 | |
| ಉದ್ಯೋಗ | : | ಗಾರೆ ಕೆಲಸ | |
| ವಾಸ ಸ್ಥಳ | : | ಕೀಳನಪುರ | |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ಈಗ ನಾನು ನೋಡುತ್ತಿರುವ ನಿಪಿ2 ರಲ್ಲಿನ ಸಹಿ ನನ್ನದಿದೆ. ಸದರಿ ಸಹಿಯನ್ನು ನಿಪಿ2 ಬಿ ಎಂದು ಗುರುತಿಸಿದೆ. ಈಗ 3 ವರ್ಷದ ಹಿಂದೆ ಚಟ್ನಹಳ್ಳಿ ಗ್ರಾಮದ ವರುಣ ಕಾಲುವೆ ಬಳಿ ಆ ಸಹಿ ಮಾಡಿರುತ್ತೇನೆ. ಆ ಕಾಲಕ್ಕೆ ಅಲ್ಲಿ ಜನ ಸೇರಿದ್ದನ್ನು ನೋಡಿ ನಾನು ಅಲ್ಲಿಗೆ ಹೋಗಿದ್ದೆ. ಆ ಸ್ಥಳದಲ್ಲಿ ಕಾಲುವೆ ಏರಿ ಮೇಲೆ ಒಂದು ಹೆಂಗಸಿನ ಶವ ಇತ್ತು. ನಾನು ಅದನ್ನು ನೋಡಿ 1 ಗಂಟೆವರೆಗೆ ಆ ಸ್ಥಳದಲ್ಲಿದೆ. ಆಗ ನನ್ನ ಸಹಿ ಪಡೆದಿರುತ್ತಾರೆ. ಈಗ ನಾನು ನೋಡುತ್ತಿರುವ ನಿಪಿ3 ರಿಂದ 6 ಫೋಟೊದಲ್ಲಿ ಕಾಣುವ ಶವ ನಾನು ಆ ದಿನ ನೋಡಿದ ಶವ ಇದೆ. ನಾನು ನೋಡಿದಾಗ ಆ ಶವದ ಮುಖದ ಭಾಗ ಕಿತ್ತುಹೋಗಿ ಬುರುಡೆ ಕಾಣುತ್ತಿತ್ತು. ಆ ಶವದ ಬಲಗೈನಲ್ಲಿ

ರವಿಕುಮಾರ್ ಎಂಬ ಹಚ್ಚೆ ಇತ್ತು. ಶವದ ಕೈಕಾಲು ಚನ್ನಾಗಿದ್ದವು. ಶವದ ಮೈಮೇಲೆ ಬಟ್ಟೆಗಳಿದ್ದವು. ಆ ಕಾಲಕ್ಕೆ ಪೋಲಿಸರು ಶವ ಬಿದ್ದಿದ್ದ ಸ್ಥಳದಲ್ಲಿನ ಕಾಲುವೆ ನೀರನ್ನು ಬಾಟಲಿಗೆ ತುಂಬಿಕೊಂಡರು. ಈಗ ನಾನು ನೋಡುತ್ತಿರುವ ಹಸಿರು ಬೌಸ್, ಕೆಂಪು ಬಣ್ಣದ ಪೆಟ್ಟಕೋಟ್, ಕಪ್ಪು ಮತ್ತು ಹಸಿರು ಬಣ್ಣದ ಸೀರೆ ಆ ಕಾಲಕ್ಕೆ ಶವದ ಮೇಲಿದ್ದ ಬಟ್ಟೆಗಳಿವೆ. ಸದರಿ ಬಟ್ಟೆಗಳನ್ನು ಎಂಓ 1 ರಿಂದ 3 ಎಂದು ಗುರುತಿಸಿದೆ. ಆ ಕಾಲಕ್ಕೆ ಆ ಶವ ಬಡಗಲಹುಂಡಿಯ ಸಾಕಮ್ಮಳ ಶವ ಎಂದು ಗೊತ್ತಾಯಿತು. ಅಣ್ಣತಮ್ಮಂದಿರ ಗಲಾಟೆ ಕಾಲಕ್ಕೆ ಸಾಕಮ್ಮಳನ್ನು ಅವರ ಅಣ್ಣತಮ್ಮಂದಿರು ಕೊಲೆ ಮಾಡಿದ್ದಾರೆ ಎಂದು ಆ ಕಾಲಕ್ಕೆ ಗೊತ್ತಾಯಿತು. ಈ ಬಗ್ಗೆ ನನ್ನ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ವಿ.ಬಿ.ಎನ್ ವಕೀಲರಿಂದಃ**

ಆ ದಿನ ಶವದ ಮುಖದ ಭಾಗದಲ್ಲಿ ಚರ್ಮ ಮತ್ತು ಮಾಂಸವನ್ನು ಜಲಚರಗಳು ತಿಂದಿದ್ದರಿಂದ ಕೇವಲ ಬುರುಡೆ ಮಾತ್ರ ಇತ್ತು ಎಂದರೆ ನಿಜ. ಮೈಮೇಲಿನ ಚರ್ಮ ಸಹ ಕಿತ್ತುಹೋಗಿತ್ತು ಎಂದರೆ ಸರಿಯಲ್ಲ. ದೇಹದ ಅಲ್ಲಲ್ಲಿ ಜಲಚರಗಳು ಚರ್ಮವನ್ನು ತಿಂದಿದ್ದವು ಎಂದರೆ ನಿಜ. ಆ ಶವ ನೋಡಿದಾಗ ಅದು ಇಂತಹ ವ್ಯಕ್ತಿಯದ್ದು ಗೊತ್ತಾಗುತ್ತಿರಲಿಲ್ಲ ಎಂದರೆ ನಿಜ. ಅಲ್ಲಿ ಸೇರಿದ್ದವರು ಆ ಶವ ಸಾಕಮ್ಮಳದ್ದು ಎಂದು ಹೇಳಿದ್ದರಿಂದ ಆ ಬಗ್ಗೆ ಗೊತ್ತಾಯಿತು. ಆ ದಿನ ಅಲ್ಲಿ ಸೇರಿದ್ದ ಎಲ್ಲರೂ ಸಾಕಮ್ಮಳ ಸಹೋದರರು ಅವಳನ್ನು ಕೊಲೆ ಮಾಡಿದ್ದಾರೆ ಎಂದು ಹೇಳುತ್ತಿದ್ದರು, ಆದರೆ ಯಾರು ಆ ರೀತಿ ಹೇಳುತ್ತಿದ್ದರು ಎಂದು ನಿಖರವಾಗಿ ಗೊತ್ತಿಲ್ಲ. ನೀರಿನಿಂದ ಹೆಣ ತೆಗೆದ ಬಳಿಕ ಪುನಃ ನಾನು ಠಾಣೆಗೆ ಹೋಗಿಲ್ಲ ಎಂದರೆ ನಿಜ. ಸಹಿ ಮಾಡಿದ್ದನ್ನು ಬಿಟ್ಟರೆ ಬೇರೆ ವಿಷಯ ನನಗೆ ಗೊತ್ತಿಲ್ಲ ಎಂದರೆ ನಿಜ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು
ಮೈಸೂರು